

ನೋಡುವ ಸ್ಥಿತಿಯಲ್ಲಿ ನಾನಿರಲಿಲ್ಲ. ಗಡಿಬಿಡಿಯಲ್ಲಿ ಹಿಂಬಾಗಿಲಿನಿಂದ ಹೊರಬಂದಾಗ, ಎದುರಲ್ಲಿ ಚೆಟ್ಟಿಯಪ್ಪ ಕಾಣಿಸಿದ. ನಾನು ಮತ್ತೆ ಹಿಂದಕ್ಕೆ ಓಡಿದೆ. ಪಾಗಾರ ಹಾರಿ ಹೋಗಿ, ಒಂದೆಡೆ ಅಡಗಿದೆ. ತುಸು ಹೊತ್ತು ಹುಡುಕಾಡಿ, ಚೆಟ್ಟಿಯಪ್ಪ ಹಿಂದಿರುಗಿದ. ಅನಂತರ ಪರಾರಿಯಾದೆ. ಇದಿಷ್ಟು ನಡೆದದ್ದು." ಸಾಬು ಹೇಳಿದ.

"ಈತ ಹೇಳುವುದು ಸುಳ್ಳು." ಈರಪ್ಪ ಅಬ್ಬರಿಸಿದ.

"ಸುಳ್ಳಲ್ಲ. ಯಾಕೆ ಗೊತ್ತೆ? ಆ ಹೊಗೆಗೂಡಿನ ಅಳತೆ ಗೊತ್ತೇ? ಇಪ್ಪತ್ತನಾಲ್ಕು ಇಂಚು ಅಗಲ. ಅಷ್ಟೇ ಎತ್ತರ. ಮಿಥಿಲಾ ಅದರೊಳಗೆ ಬೀಳಲು ಹೇಗೆ ಸಾಧ್ಯ? ಆಕೆಯನ್ನು ಯಾರೋ ಎಳೆದು ಹಾಕಿರಲೇಬೇಕು."

"ಚೆಟ್ಟಿಯಪ್ಪರಿಗೂ ಗೊತ್ತು ಸಾಬು ಹಾಕಿದ್ದೆಂದು." ಈರಪ್ಪನ ಉತ್ತರ.

"ಪ್ರಾಯಶಃ ಅವರು ಅಷ್ಟೆಲ್ಲಾ ಯೋಚಿಸಿರಲಿಕ್ಕಿಲ್ಲ. ಅವರಿಗೆ ನಿನ್ನ ಮೇಲೆ ಅನುಮಾನವಿರಲಿಲ್ಲ."

"ಆದರೆ, ನಿಮ್ಮ ವಾದ ಕೋರ್ಟ್‌ನಲ್ಲಿ ನಿಲ್ಲೋಲ್ಲ. ಸಾಬುವೇ ಕೊಂದನೆಂದು ನಾನು ವಾದಿಸ್ತೇನೆ. ಬೆಂಕಿಗೂಡಿನೊಳಕ್ಕೆ ಆತ ತಳ್ಳದೇ ಇದ್ದರೆ, ಬ್ಲಾಕ್‌ಮೇಲ್ ಮಾಡಿದಾಗ ಸಾಬು ಯಾಕೆ ಹಣ ಕೊಟ್ಟ?"

ಕರಮಚಂದ ಸುದೀರ್ಘ ವಿವರಣೆ ನೀಡಿದ,

"ಇದೊಂದು ಸಾಂದರ್ಭಿಕವಾದ ಸಾಕ್ಷ್ಯಗಳ ಮೇಲೆ ಬಗೆಹರಿಸಬೇಕಾದ ಪ್ರಕರಣ. ಸಾಬು ಮಿಥಿಲಾಳ ಮನೆಗೆ ಹೋಗುವ ವಿಷಯವನ್ನು ತನ್ನ ಸಹೋದ್ಯೋಗಿಯಲ್ಲಿ ಹೇಳಿದ್ದಾನೆ. ಕಚೇರಿಯಿಂದ ಹೊರಡುವಾಗ ಮಿಥಿಲಾಳಿಗೆ ಕರೆಯನ್ನೂ ಮಾಡಿದ್ದಾನೆ. ಕೊಲೆ ಮಾಡುವ ಉದ್ದೇಶವಿದ್ದವನು ಇಷ್ಟೆಲ್ಲಾ ತನ್ನ ವಿರುದ್ಧದ ಸಾಕ್ಷ್ಯ ಸೃಷ್ಟಿಸುತ್ತಾನೆಯೇ? ಆಕೆಯ ಸಾವು ಆಕಸ್ಮಿಕವೇ? ಹೊಗೆಗೂಡಿನ ಅಳತೆ ನೋಡಿದರೆ, ನೇರವಾಗಿ ಒಬ್ಬ ವ್ಯಕ್ತಿ ಅದರೊಳಗೆ ಬೀಳುವ ಸಾಧ್ಯತೆಯಿಲ್ಲ. ಅಂದರೆ, ಯಾರೋ ಆಕೆಯನ್ನ ತಳ್ಳಿರಲೇಬೇಕು! ಸಾಬು ಕಚೇರಿಯಿಂದ ಹೊರಟಿದ್ದು ಒಂದೂವರೆಗೆ. ಅಲ್ಲಿಂದ ಅರ್ಧ ತಾಸಿನ ಹಾದಿ. ಎರಡು ಗಂಟೆಗೆ ಇಲ್ಲಿಗೆ ಬಂದಿದ್ದಾನೆ. ಎರಡೂ ಹತ್ತಕ್ಕೆ ಚೆಟ್ಟಿಯಪ್ಪ ಕರೆ ಮಾಡುವಾಗ, ಈರಪ್ಪ ಮನೆಯೊಳಗೇ ಇದ್ದ. ಸಾಬುವೇ ಮಿಥಿಲಾಳ ಕೊಲೆ ಮಾಡ್ತಾ ಇದ್ದಿದ್ದರೆ,